ಪ್ರಶ್ನೆ ೧೮೬೬—ಶ್ರೀ ಸಿ.ಸಿ. ಕಲಕೋಟ ಗೈರು ಹಾಜರಿದ್ದರು.

ಪ್ರಶ್ನೆ ೧೪೨೫—ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಹಾಜರಿರಲಿಲ್ಲ.

ಪ್ರಶ್ನೆ ೫೩೭—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಹಾಜರಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಳೆಯ ಆಶ್ರಯದಲ್ಲಿರುವ ಕೆರೆಗಳು

೧೯೭೫. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಲೋಕೋಪಯೋಗಿ ಜಲಾನಯನಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಳೆಯ ಆಶ್ರಯದಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಆದರಿಂದ ಸಾಗುವಳಿಯಾಗುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಅನೇಕ ವರ್ಷಗಳಿಂದ ಈ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಈ ವರ್ಷ ಮಳೆಯಾದೇ ಎಲ್ಲಾ ಕೆರೆಗಳೂ ಒಣಗಿರುವುದರಿಂದ ಅವುಗಳ ಹೂಳು ತೆಗೆದು ಆಳ ಮಾಡುವ ಕಾರ್ಯಕ್ರಮವನ್ನು ಸರ್ಕಾರವನ್ನು ತೆಗೆದುಕೊಳ್ಳುವರೇ?

ಈ) ಈ ವರ್ಷ ತಾಲ್ಲೂಕಿನ ಎಷ್ಟು ಕೆರೆಗಳಲ್ಲಿ ಹೂಳು ತೆಗೆಯುವ ಹಾಗೂ ಆಳ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಹಾಗಿಲ್ಲದಿದ್ದಲ್ಲಿ ಸದರಿ ಕಾರ್ಯಕ್ರಮವನ್ನು ಈಗ ತೆಗೆದು ಕೊಳ್ಳಲಾಗುವುದೇ?

ಶ್ರೀ ಹೆಚ್.ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೪೦. ೨೭೦೦ ಹೆಕ್ಟೇರುಗಳು.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ಈ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಕಾರಂಜಾ ಯೋಜನೆ

೧೯೫೯. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಗೆ ನಿಗಧಿಪಡಿಸಲಾದ ಹಣವೆಷ್ಟು?

ಆ) ಇಲ್ಲಿಯವರೆಗೆ ಸರ್ಕಾರದವರು ಎಷ್ಟು ಹಣವನ್ನು ನೀಡಿದ್ದಾರೆ ಹಾಗೂ ಕೊಡಬೇಕಾದ ಹಣವೆಷ್ಟು?

ಇ) ೧೯೮೪-೮೫ನೇ ಸಾಲಿನಲ್ಲಿ ಯೋಜನೆಗಾಗಿ ಖರ್ಚು ಮಾಡಿದ ಹಣವೆಷ್ಟು?

ಈ) ಕಾರಂಜಾ ಯೋಜನೆಯನ್ನು ಎಷ್ಟು ವರ್ಷಗಳಲ್ಲಿ ಪೂರ್ತಿಗೊಳಿಸಬೇಕಾಗಿತ್ತು. ಹಾಗೂ ಆದನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾದ ಮೂಲ ಯೋಜನೆಯ ಪ್ರಕಾರ ೯.೯೦ ಕೋಟಿ ರೂಪಾಯಿಗಳು,

ಆ) ೧೯೮೬ನೇ ಇಸವಿ ಜನವರಿ ಮಾಹೆ ಅಂತ್ಯದವರೆಗೆ ೨೭.೮೬ ಕೋಟಿ ರೂಪಾಯಿಗಳು ೧೯೮೪-೮೫ನೇ ಸಾಲಿನ ದರಪಟ್ಟಿಯ ಮೇಲಿನ ಯೋಜನೆಯ ಪರಿಷ್ಕೃತ ಅಂದಾಜಿನ ಮೊಬಲಗು ೫೯.೯೦ ಕೋಟಿ ರೂಪಾಯಿಗಳು. ಈ ಮೊಬಲಗಿನ ಪರಿಗಣನೆಯಂತೆ ಬಾಕಿ ಕೊಡಬೇಕಾದ ಹಣ ೩೨.೦೪ ಕೋಟಿ ರೂಪಾಯಿಗಳು.

ಇ) ೪.೭೩ ಕೋಟಿ ರೂಪಾಯಿಗಳು.

ಈ) ೪ ವರ್ಷಗಳಲ್ಲಿ ತಾತ್ಕಾಲಿಕ ಕಾರ್ಯಕ್ರಮದಂತೆ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಹತ್ತರಗಿ ಸೇತುವೆಯ ಹತ್ತಿರ ವಾಹನಗಳ ಮೇಲೆ ವಿಧಿಸುತ್ತಿರುವ ತೆರಿಗೆ.

೧೬೦೯. ಶ್ರೀ ಕೆ. ಎ. ಮಗಣ್ಣವರ (ಸದಲಗಾ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಮೇಲಿನ ಹತ್ತರಗಿ ಸೇತುವೆಯ ಹತ್ತಿರ ವಿಧಿಸುತ್ತಿರುವ ವಾಹನಗಳ ಮೇಲಿನ ತೆರಿಗೆಯನ್ನು ನಿಲ್ಲಿಸಲಾಗುವುದೆ ?

ಆ) ಇಲ್ಲಿಯವರೆಗೆ ಎಷ್ಟು ತೆರಿಗೆಯನ್ನು ವಸೂಲು ಮಾಡಲಾಗಿದೆ ?

ಇ) ಸದರಿ ತೆರಿಗೆಯನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಯಾವ ಕೆಲಸಕ್ಕಾಗಿ ಉಪಯೋಗ ಮಾಡಲಾಗುತ್ತಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ನಿಲ್ಲಿಸಲಾಗುವುದು.

ಆ) ದಿನಾಂಕ ೧೪-೨-೧೯೮೬ರ ವರೆಗೆ ೨,೩೪,೭೨,೫೮೦-೦೦ ರೂಪಾಯಿಗಳನ್ನು ಶುಲ್ಕ ರೂಪದಲ್ಲಿ ವಸೂಲಿ ಮಾಡಲಾಗಿದೆ.

ಇ) ಸೇತುವೆಗಳಲ್ಲಿ ವಸೂಲಿ ಮಾಡಲಾದ ಸುಂಕದ ಹಣ ಕೇಂದ್ರ ಸರ್ಕಾರಕ್ಕೆ ಸೇರಿದ ಆದಾಯ. ಸೇತುವೆಗಳಲ್ಲಿ ವಸೂಲಿ ಮಾಡಲಾದ ಸುಂಕದ ಹಣವನ್ನು ಆಯಾ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಕೆಲಸಗಳಿಗಾಗಿ ಪುನಃ ಹೂಡಲಾಗುತ್ತಿದೆ. ಬೆಂಗಳೂರು-ನೆಲಮಂಗಲ ವಂಧ್ಯ ಯೋಜಿಸಲಾಗಿರುವ ನಾಲ್ಕು ವಾಹನ ಮಾರ್ಗೀಕರಣ ಕೆಲಸವನ್ನು ಈ ಸುಂಕದ ಕಟ್ಟೆಗಳಲ್ಲಿ ವಸೂಲಿ ಮಾಡಲಾದ ಹಣದಿಂದ ನಿರ್ವಾಣವಾಗುತ್ತಿದೆ.

ಸಿರ್ಸಿ ತಾಲ್ಲೂಕಿನಲ್ಲಿ ಕೋಕೋ ವ್ಯವಸಾಯದಿಂದ ಬರುವ ಆದಾಯ.

೧೬೫೪. ಶ್ರೀ ಜಿ. ಎಸ್. ಹೆಗಡೆ ಅಜ್ಜೀಬಾಳ (ಅಂಕೋಲ).— ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಣ್ಯ ಇಲಾಖೆಯ ಕೋಕೋ ನೆಡುತೋಪುಗಳನ್ನು ಬೆಳೆಸುವುದನ್ನು ನಿಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ ಸಿರಸಿ ತಾಲ್ಲೂಕಿನಲ್ಲಿ ಇಲಾಖಾ ಮುಖಾಂತರ ಬೆಳೆಸಿದ ನೆಡುತೋಪುಗಳು ಯಾವ ಸ್ಥಿತಿಯಲ್ಲಿವೆ ?

ಇ) ಈ ನೆಡುತೋಪುಗಳಿಂದ ಸರ್ಕಾರಕ್ಕೆ ಲಾಭವಾಗಿರುತ್ತದೆಯೇ ?

ಈ) ಹಾಗಿದ್ದಲ್ಲಿ ಒಟ್ಟು ಸಿಕ್ಕಿವಂತಹ ವರಮಾನವೆಷ್ಟು ವರಮಾನ ಸಿಕ್ಕಿರದಿದ್ದಲ್ಲಿ ಅದಕ್ಕೆ ಕಾರಣ ಏನು ?